ದೈತ್ಯ ಪಿರಮಿಡ್



ಮಾತಾಡುವ ಮುಕ್ಕಾಲು ಪಾಲು ಜನ ಇದೇ ರೀತಿಯಲ್ಲಿ ಸಮಯ ಹೇಳುವವರೇ! ರೆಸಾರ್ಟಿಗೆ ಬಂದ ಮರುದಿನ ಸಬ್‌ಮರೈನ್ ಟ್ರಿಪ್ ಕಾಯ್ದಿರಿಸಿದ್ದೆವು. ಮರುದಿನದ ಟೈಂ ಟೇಬಲ್ ಕೊಡಬಂದ ಗೈಡ್ 'ಬೀ ರೆಡಿ ಎಟ್ ಕ್ವಾರ್ಟ್‌ರ್ ಫಾಸ್ಟ್ ನೈನ್' ಅಂದಾಗ ದಂಗಾದೆವು.

ಮುಂದಿನ ಮೂರು ದಿನಗಳು ಶಾರ್ಮ್‌ನ ಸಮುದ್ರ ದಡಗಳನ್ನು, ಉಳಿದ ಪ್ರವಾಸೀ ತಾಣಗಳನ್ನು ನೋಡುತ್ತ ಕಳೆದು ಹೋದವು. ಸಮುದ್ರ ಮಧ್ಯೆ ಸಬ್ ಮರೈನ್ ದೋಣಿಯಲ್ಲಿ ಹೋದಾಗ ಹತ್ತಾರು ಮೈಲಿಗಳಷ್ಟು ಹವಳದ ದಂಡೆಗಳು. ಜಲರಾಶಿಯಲ್ಲಿ ಅಪರೂಪದ ಬಣ್ಣದ ಮೀನುಗಳು ಮತ್ತು ಅವುಗಳ ಮಿನುಗುವ ಕಣ್ಣುಗಳು. ಗಾಜಿನ ಪರದೆಯ ಈ ಕಡೆಯಿಂದ ಕಡಲಿನ ಒಡಲಿನತ್ತ ನೋಟ ಹಾಯಿಸಿದರೆ 'ಓಹ್.. ಈ ಸಮಯ ಇಲ್ಲೇ ನಿಂತುಹೋಗಲಿ' ಎನ್ನುವ ಭಾವ.

ನಾವಿಳಿದುಕೊಂಡ ರೆಸಾರ್ಟಿನಿಂದ ಹತ್ತು ಮಾರು ನಡೆದರೆ ಈಗಷ್ಟೇ ತೊಳೆದಿಟ್ಟತಂಹ ಮರಳು ಮತ್ತು ಕಣ್ಣು ಸೋಲುವಷ್ಟು ನೀಲ್ಗಡಲು. ಅಲ್ಲಿ ಸ್ನಾರ್ಕಲಿಂಗ್ (ಜಾಲಪಾದದಂತಹ ಪರಿಕರ ಮತ್ತು ಉಸಿರಾಟಕ್ಕೆ ಸಹಾಯ ಮಾಡುವ ಪೈಪಿನೊಂದಿಗೆ ನೀರಿನಲ್ಲಿ ಮುಳುಗೇಳುವುದು) ಮತ್ತು ಸ್ಕೂಬಾ ಡೈವಿಂಗ್ ವ್ಯವಸ್ಥೆಗಳು. ನಾಲ್ಕು ಹೆಜ್ಜೆ ಕಾಲಿಟ್ಟರೆ ಸಾಕು, ಸುತ್ತಲ ಹವಳದ ದಂಡೆಗಳು ನಿಚ್ಚಳವಾಗಿ ಕಾಣುವಷ್ಟು ಸ್ಫಟಿಕ ಶುಭ್ರವಾದ ನೀರಿನಲ್ಲಿ ಈ ಸ್ನಾರ್ಕಲಿಂಗ್ ಹಾಗೂ ಸ್ಕೂಬಾ ಡೈವಿಂಗ್‌ನ ಯೋಚನೆ ಮತ್ತೇರಿಸುವಂತಿತ್ತು. ಮಗ ಚಿಕ್ಕವನಾದ್ದರಿಂದ ಯಾವ ಸಾಹಸಕ್ಕೂ ಮುಂದಾಗಲು ಸಾಧ್ಯವಾಗಲಿಲ್ಲ.



ಈ ಈಜುಕೊಳದಿಂದ ಏಳಲು ಮನಸಾದೀತೇ..!




ಎಡವಿ ಬಿದ್ದರೆ ಸಮುದ್ರ ತೀರ, ನೀಲ್ಗಡಲು...

## ಈಜಿಪ್ಟ್ ರಾಜಧಾನಿ ಕೈರೋ

ಉದ್ದಾನುದ್ದಕ್ಕೆ ಹರಿದಿರುವ ನೈಲ್ ನದಿಯನ್ನು ನಿರ್ಮಲವಾಗಿ ಇಟ್ಟುಕೊಂಡಿರುವುದನ್ನು ಬಿಟ್ಟರೆ ಕೈರೋವಿನ ಇತರ ಪ್ರವಾಸೀ ಆಕರ್ಷಣೆಗಳು ಗಮನ ಸೆಳೆಯಲಿಲ್ಲ. ವಿಶ್ವಖ್ಯಾತಿಯ ಪಿರಮಿಡ್‌ಗಳಾಗಲೀ, ಸ್ಫಿಂಕ್ಸ್ ಆಫ್ ಗೀಜ಼ಾ ಇರಲಿ ಅಥವಾ ಹೆಸರು ಮಾಡಿರುವ ಈಜಿಪ್ಶಿಯನ್ ಮ್ಯೂಸಿಯಂ ಆಗಲೀ ನಮ್ಮನ್ನು ಹಾಗೂ ನಮ್ಮಂಥ ಪ್ರವಾಸಿಗರನ್ನು ತುಂಬ ಹೊತ್ತು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವಾಗಲಿಲ್ಲ.

ಪಿರಮಿಡ್ಡುಗಳ ಹಾದಿಯಲ್ಲಿ, ಗೀಜ಼ಾದ ತಪ್ಪಲಿನಲ್ಲಿ ಬಿಳಿ ಚರ್ಮದವರ ಮೇಲೆ ಮುಗಿಬೀಳುವ ವ್ಯಾಪಾರಸ್ಥರು; ಅರಬ್ಬೀ ರುಮಾಲು ಸುತ್ತಿ ಫೋಟೊ ತೆಗೆಸಿಕೊಳ್ಳುವಂತೆ ಇನ್ನಿಲ್ಲದ ಒತ್ತಾಯ ಹೇರಿ ಹಣ ಕೀಳುವ ಸ್ಥಳೀಯರು, ಪ್ರವಾಸಿಗರಿಗೆ ಕಿರಿ ಕಿರಿ ಎನಿಸುವ ಪಡ್ಡೆ ಹುಡುಗರು..!

ಕೈರೋವಿನ ದೊಂಬಿಯನ್ನು ಹಿಂದೆಯೇ ಬಿಟ್ಟು ಶಾರ್ಮ್ ಎಲ್‌ಶೇಕ್‌ಗೆ ಮತ್ತೆ ಬಂದಿಳಿದಾಗ ಮನಸ್ಸಿಗೆ ನೆಮ್ಮದಿ. ಮಾರನೆಯ ರಾತ್ರಿ ಇಂಗ್ಲೆಡಿಗೆ ಪ್ರಯಾಣ ಬೆಳೆಸುವ ಅನಿವಾರ್ಯತೆ ಇದ್ದರೂ ಸುಂದರ ಶಾರ್ಮ್‌ನ ಆಕರ್ಷಣೆ ಕಡಿಮೆಯಾಗಲಿಲ್ಲ. ಇನ್ನೊಮ್ಮೆ ವಿರಾಮದಲ್ಲಿ ಬಂದು ಸಮುದ್ರ ದಡದಲ್ಲಿ ಕೂತು ಸಮಯ ಕಳೆಯಬೇಕು ಎಂಬ ನಿರ್ಧಾರದೊಂದಿಗೇ ಮರಳಿದೆವು. ●



ಸ್ಫಿಂಕ್ಸ್ ಆಫ್ ಗೀಜ಼ಾ